ಮುಂತಾದಿ ಇತಿಹಾಸಕ್ಕೆ ಮಸಿ ಬಳಿಯುವ ವಿಚಾರಗಳಿಂದ ತುಂಬಿದ ಪುಸ್ತಕ ವೀರಾಂಗನಾ ಚಿನ್ನಮ್ಮ ಪಿಯುಸಿ.ಗೆ ನಾನ್ಡೀಟೈಲ್ಡ್ ಟೆಕಸ್ಟ್ ಅಂತ ಹೆಚ್ಚಿದ್ದಾರೆ. ಈ ಕೃತಿ ನಾಡಿಗೇ ಅವಮಾನ, ಕಾರಣ ಈ ಕೂಡಲೇ ಈ ಪುಸ್ತಕವನ್ನು ರದ್ದು ಮಾಡಬೇಕೆಂದು ಕೋರುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ವೀರಾಂಗನೆ ಚಿನ್ನಮ್ಮ ಎಂಬ ಹಿಂದಿ ಪುಸ್ತಕವನ್ನು ಉಪ ಪಠ್ಯವಾಗಿ 1992-93ನೇ ಸಾಲಿನಿಂದ ದ್ವಿತೀಯ ಪಿ.ಯೂ.ಸಿ.ಗೆ ಅಳವಡಿಸಲಾಗಿದೆ. ಹಾಗೂ 1993-94ನೇ ಶೈಕ್ಷಣಿಕ ಸಾಲಿಗೆ ಮುಂದುವರಿಸಿದೆ. ಈ ಪುಸ್ತಕವನ್ನು ಶ್ರೀ ಎಸ್. ಶ್ರೀಕಂಠಮೂರ್ತಿಯವರು ಬರೆದಿದ್ದು ಕರ್ನಾಟಕ ಹಿಂದಿ ಮಹಿಳಾ ಸೇವಾ ಸಂಘ ಚಾಮರಾಜಪೇಟೆ ಬೆಂಗಳೂರುರವರು ಪ್ರಕಾಶನ ಪಡಿಸಿದ್ದಾರೆ. ಪಠ್ಯಪುಸ್ತಕ ತಜ್ಞರಿಂದ ಅನುಮೋದಿಸಿ ಆಯ್ಕೆಯಾಗಿರುತ್ತದೆ.

2. ಈ ಉಪ ಪಠ್ಯದಲ್ಲಿ ಬರುವ ಅಸಂಗತಗಳ ಬಗ್ಗೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ದಿನಾಂಕ 23-11-1993 ಮತ್ತು 3-12-1993ರಲ್ಲಿ ವಾಚಕರು ಪ್ರತಿಕ್ರಿಯ ವ್ಯಕ್ತಪಡಿಸಿದ್ದು ಇಲಾಖೆಯ ಗಮನಕ್ಕೆ ಈಗಾಗಲೇ ಬಂದಿದೆ.

3. 1993-94ನೇ ಶೈಕ್ಷಣಿಕ ವರ್ಷ ಮುಗಿಯುತ್ತಲಿರುವುದರಿಂದ ಹಾಗೂ ಈ ಉಪ ಪಠ್ಯದ ಪ್ರಶ್ನೆ ಪತ್ರಿಕೆಯ ಸಿದ್ಧತೆ ನಡೆದಿರುವುದರಿಂದ ಈ ಹಂತದಲ್ಲಿ ಪುಸ್ತಕವನ್ನು ಬದಲಾಯಿಸಲು ಸಾಧ್ಯವಾಗಲಾರದು. ಮುಂಬರುವ 1994-95ನೇ ಸಾಲಿಗೆ ಈ ಉಪ ಪಠ್ಯವನ್ನು ಬದಲಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಚನ್ನಪಟ್ಟಣ ಸ್ಪನ್‌ಸಿಲ್ಕ್ ಮಿಲ್ಗೆ ಸೇರಿದ ಮನೆಗಳನ್ನು ಕರ್ನಾಟಕ ಗೃಹನಿರ್ಮಾಣ ಮಂಡಳಿಯವರು ಬಿಡುಗಡೆ ಮಾಡುವುದರ ಬಗ್ಗೆ

Sri Sadath Ali Khan (Channapatna) : Mr. Speaker Sir, Will the Hon'ble Minister for Housing be pleased to state regarding disposal of 46 Houses constructed by the KHB attached to spun silks Mills at Channapatna.

The Government Order No. HUD/5-1HS_78 dated 21/24-9-79 so far as it relates to Channapatna has not been implemented even though 15 years have elapsed while 92 Houses attached to the Sister Unit of Silk Filature at T.Narasipur has implemented as long back as July 1980; Whether the Government have since withdrawn their earlier Orders? If so, would it not defeat the very objective of the subsidised Industrial House Scheme sponsored by the Central and State Government which envisages creation of Housing facilities to the employees on their attaining the age of Superannuation; The action of the Managing Director KSIC justifiable in instructing eviction proceedings despite directions from the Government and KHB not to evict the present occupants vide letter No. HUD-2-IHS-79 dated 11/12-3-83; Is the Government aware that the land on which 46 houses were constructed by KHB belonged to the erstwhile Mysore Spun Silk Mills (P) Ltd., which wanted liquidation and purchased by Government through the Official Liquidator,

High Court of Karnataka in 1961; Will the Government issue directions to the KHB to implement their Order dated 21/24-9-79 for the welfare of the weaker sections of the society? The Hon'ble Chief Minister has also issued directions to the concerned to dispose the 46 houses to the present occupants.

ಶ್ರೀ ಡಿ.ಎ. ಚಿನ್ನಪ್ಪ (ಗಣಿ ಹಾಗೂ ಭೂಗರ್ಭ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

1857ರಲ್ಲಿ ಕರ್ನಾಟಕ ಗೃಹ ಮಂಡಳಿಯು ಚನ್ನಪಟ್ಟಣದಲ್ಲಿ 46 ಮನೆಗಳನ್ನು ಸುಮಾರು 2 ಎಕರೆ 25 ಗುಂಟೆ ಸರ್ಕಾರಿ ಸ್ಪನ್ ಸಿಲ್ಕ್ ಮಿಲ್ಲ ಜಮೀನಿನಲ್ಲಿ ಕಾರ್ಮಿಕರಿಗಾಗಿ ಬಾಡಿಗೆ ಆಧಾರದ ಮೇಲೆ ನಿರ್ಮಿಸಿ ಮಿಲ್ಲಿಗೆ ವಹಿಸಿಕೊಡಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಹೀಗೆ ನಿರ್ಮಿಸಲಾದ ಮನೆಗಳನ್ನು ಅರ್ಹ ಹಂಚಿಕೆ ಬಾಡಿಗೆದಾರರಿಗೆ ಕೆಲವು ಷರತ್ತುಗಳೊಂದಿಗೆ ಹಂಚಿಕೆ ಮಾಡಲು ರಾಜ್ಯ ಸರ್ಕಾರವು ಆಜ್ಞೆ ಮಾಡಿ ಸಂಖ್ಯೆ:ಹೆಚ್.ಯುಡಿ. ಎಸಐಹೆಚ್ಎಸ್. 78, ದಿನಾಂಕ 21:24-9-79ರಲ್ಲಿ ಮಂಡಳಿಗೆ ಅನುಮತಿ ನೀಡಿದೆ. ಸದರಿ ಆಜ್ಞೆಯಲ್ಲಿ ಚನ್ನಪಟ್ಟಣದ 46 ಮನೆಗಳೂ ಸೇರಿದೆ.

ಈ ಮಧ್ಯೆ ಮನೆಗಳ ಬಾಡಿಗೆ ಬಾಕಿಯನ್ನು ಸಂದಾಯ ಮಾಡಲು ತಿಳಿಸಿದಾಗ, ಕರ್ನಾಟಕ ರೇಷ್ಮೆ ಉದ್ಯಮದ ಜನರಲ್ ಮ್ಯಾನೇಜರ್ರವರು ಸರ್ಕಾರಿ ಸ್ಪನ್ ಸಿಲ್ಕ್ ಮಿಲ್ಲಿನ ಎಲ್ಲಾ ಆಸ್ತಿ ಹಾಗೂ ಮನೆಗಳನ್ನು ಕರ್ನಾಟಕ ರೇಷ್ಮೆ ಉದ್ಯಮ ನಿಗಮವು 1-9-81ರಿಂದ ವಹಿಸಿಕೊಂಡಿರುವುದೆಂದು ಹಾಗೂ ಮನೆ ಬಾಡಿಗೆ ಬಾಕಿಯನ್ನು ಸಂದಾಯ ಮಾಡಲಾಗುವುದಿಲ್ಲವೆಂದು ತಿಳಿಸಿದ್ದಾರೆ.

ಬಾಡಿಗೆ ಬಾಕಿಯನ್ನು ಸಂದಾಯ ಮಾಡಬೇಕೆಂದು ರೇಷ್ಮೆ ಉದ್ಯಮವನ್ನು ಹಲವಾರು ಬಾರಿ ವಿನಂತಿಸಲಾಗಿದೆ. ಆದರೂ ಹಣ ಸಂದಾಯವಾಗಿಲ್ಲ.

ಈ ಮನೆಗಳಲ್ಲಿ ವಾಸವಾಗಿರುವ ಬಾಡಿಗೆದಾರರು, 1979ರ ಸರ್ಕಾರಿ ಆಜ್ಞೆಯ ಪ್ರಕಾರ ಮನೆಗಳನ್ನು ತಮಗೆ ಹಂಚಿಕೆ ಮಾಡಿಕೊಡಬೇಕೆಂದು ಕೋರುತ್ತಿದ್ದಾರೆ.

ಆದರೆ ಈ ಮನೆಗಳನ್ನು ಅಂದಿನ ಸರ್ಕಾರಿ ಸ್ಪನ್ ಮಿಲ್ಲ ಭೂಮಿಯಲ್ಲಿ ನಿರ್ಮಿಸಲಾಗಿದೆ. ಸದರಿ ಭೂಮಿಯು ಈಗ ಕರ್ನಾಟಕ ರೇಷ್ಮೆ ಉದ್ಯಮದ ಒಡೆತನದಲ್ಲಿದೆ. ಆದ್ದರಿಂದ ಮನೆಗಳನ್ನು ಬಾಡಿಗೆದಾರರಿಗೆ ಹಂಚಲು ರೇಷ್ಮೆ ಉದ್ಯಮದ ಅನುಮತಿ ಅವಶ್ಯವಿದೆ. ಇದಲ್ಲದೆ ಬಾಡಿಗೆ ಬಾಕಿ ಸುಮಾರು 1.55 ಲಕ್ಷ ರೂಪಾಯಿಗಳನ್ನು ಸಹ ಉದ್ಯಮದಿಂದ ಅಥವಾ ಬಾಡಿಗೆದಾರರಿಂದ ವಸೂಲು ಮಾಡಬೇಕಾಗಿದೆ.

ಮನೆಗಳನ್ನು ಬಾಡಿಗೆದಾರರಿಗೆ ಹಂಚಿಕೆ ಮಾಡಲು ರೇಷ್ಮೆ ಉದ್ಯಮ ನಿಯಮಿತದವರಿಂದ ಅನುಮತಿ ಪಡೆಯಲು ಪ್ರಯತ್ನ ಮಾಡಲಾಗುತ್ತಿದೆ.

ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರದವರು ಗೋವಿನ ಜೋಳವನ್ನು ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಖರೀದಿ ಮಾಡಿದ್ದು ಇದುವರೆಗೂ ರೈತರಿಗೆ ಹಣ ಪಾವತಿ ಮಾಡದಿರುವುದರ ಬಗ್ಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರದವರು ಗೋವಿನ ಜೋಳವನ್ನು ಮಾರ್ಕೆಟಿಂಗ್